# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್.ಸಿ.* 216/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಪ್ರತಾಪ್.ಎ.ಎಸ್ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಶಿವಣ್ಣೇಗೌಡ | | **08.08.2024** |
| **ವಯಸ್ಸು** | ಃ **42** ವರ್ಷ | | |
| **ವೃತ್ತಿ** | ಃ ಬ್ಯಾಟರಿ ಶಾಪ್ | **ಪ್ರಾ.ಸಾ.** | ಃ **02** |
| **ವಾಸಸ್ಥಳ** | ಃ ರಾಘವೇಂದ್ರನಗರ, ಮೈಸೂರು | **ಚಾ.ಸಾ.** | ಃ **03** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ*02.03.2021* ರಂದು ಕೆ.ಸಿ ಲೇಔಟ್ ನ ಅನೂಪ್ ಎನ್ನುವವರ ಸಂಬಂಧಿಕರ ಮನೆಯಲ್ಲಿ ಮಹಜರ್ ಮಾಡಲು ಸಹಕರಿಸುವಂತೆ ಆ ಅನೂಪ್ ಇವರು ಮತ್ತು ಪೋಲೀಸರು ಕೇಳಿಕೊಂಡಿದ್ದರಿಂದ ಆ ದಿನ ಸಂಜೆ *4* ಗಂಟೆಗೆ ಆ ಮನೆ ಬಳಿ ಹೋಗಿದ್ದೆ. ಆ ಕಾಲಕ್ಕೆ ಆ ಮನೆಯಲ್ಲಿ ಮೆಟ್ಟಿಲು ಬಳಿ ಎಣ್ಣೆ ಚೆಲ್ಲಿದ್ದನ್ನು ನನಗೆ ತೋರಿಸಿ ಮಹಜರ್ ಮಾಡಿದ್ದರು. ಆ ಸ್ಥಳದಲ್ಲಿ ಮೆಟ್ಟಿಲು ಮೇಲೆ ಮೆಟ್ಟಿಲು ಮುಂಭಾಗ ಟೈಲ್ಸ್ ಮೇಲೆ ಎಣ್ಣೆ ಚೆಲ್ಲಿತ್ತು. ಆ ಕಾಲಕ್ಕೆ ಒಂದು ಎಣ್ಣೆ ಪ್ಯಾಕೆಟ್ ಅನ್ನು ಮತ್ತು ಒಂದು ಬಟ್ಟಲನ್ನು ಅಮಾನತ್ತು ಪಡಿಸಿಕೊಂಡಿದ್ದರು. ಆ ಕಾಲಕ್ಕೆ ಈಗ ನನಗೆ ತೊರಿಸುತ್ತಿರುವ ಎಂ.ಒ-*2* ಡಬ್ಬಿ ಸಹ ಅಲ್ಲಿ ಇತ್ತು. ಅವುಗಳನ್ನು ನಾನು ಹೊಗುವಷ್ಟರಲ್ಲಿ ಕಟ್ಟಿ ಇಟ್ಟಿದ್ದರು. ಅವುಗಳನ್ನು ನನಗೆ ತೋರಿಸಿದ್ದರು. ಎಣ್ಣೆಯನ್ನು ಯಾರೋ ಅಣ್ಣ ತಮ್ಮಂದಿರ ಜಗಳದ ಕಾಲಕ್ಕೆ ಅವರ ಸಂಬಂಧಿಗಳು ಬಿಸಿ ಮಾಡಿ ಚೆಲ್ಲಿದ್ದಾಗಿ ಆ ಕಾಲಕ್ಕೆ

ಹೇಳಿದ್ದರು. ಆ ಕಾಲಕ್ಕೆ ಬೇರೆ ಏನು ಅಮಾನತ್ತು ಪಡಿಸಿಕೊಂಡಿದ್ದರು ಎಂದು ನೆನಪಿಲ್ಲ. ಆ ಕಾಲಕ್ಕೆ ಅಲ್ಲಿ ಬರವಣಿಗೆ ಮಾಡಿ ನನ್ನ ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*1* ಆ ದಿನ ಬರವಣಿಗೆ ಮಾಡಿದ್ದ ದಾಖಲೆ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*1*(ಬಿ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನೋಟಿಸ್ ಗೂ ಸಹ ಅದೇ ಸ್ಥಳದಲ್ಲಿ ಸಹಿ ಪಡೆದಿದ್ದರು. ಸದರಿ ನೊಟಿಸ್ ಅನ್ನು ನಿ.ಪಿ-*4* ಮತ್ತು ಸಹಿಯನ್ನು ನಿ.ಪಿ-*4*(ಎ) ಎಂದು ಗುರುತಿಸಿದೆ.

*2.* ನಂತರ ದಿಃ*03.03.2021* ರಂದು ಅನೂಪ್ ಎನ್ನುವವರು ಒಂದು ಪ್ಯಾಂಟ್ ಮತ್ತು ಒಂದು ಶರ್ಟ್ ಅನ್ನು ಪೋಲೀಸ್ ಠಾಣೆ ಬಳಿ ತಂದಿದ್ದರು. ಆ ಪ್ಯಾಂಟ್ ಮತ್ತು ಶರ್ಟ್ ಅನ್ನು ಪಡೆದುಕೊಂಡು ಅಲ್ಲಿಯೂ ಸಹ ಒಂದು ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*2* ಮತ್ತು *3* ದಾಖಲೆಗಳಿಗೆ ಆ ಕಾಲಕ್ಕೆ ಸಹಿ ಪಡೆದಿದ್ದರು. ಸದರಿ ಸಹಿಗಳನ್ನು ನಿ.ಪಿ-*2*(ಬಿ) ಮತ್ತು *3*(ಬಿ) ಎಂದು ಗುರುತಿಸಿದೆ. ಆ ಕಾಲಕ್ಕೆ ಮನೆಯ ಬಳಿ ಮಹಜರ್ ಮಾಡಿದಾಗ ಒಬ್ಬ ಕ್ರಿಶ್ಚಿಯನ್ ವ್ಯಕ್ತಿ ಹಾಜರಿದ್ದರು ಅವರ ಹೆಸರು ನೆನಪಿಲ್ಲ. ಪೋಲೀಸ್ ಠಾಣೆ ಬಳಿ ನನ್ನ ಸಹಿ ಪಡೆದಾಗ ನಾನು, ಅನೂಪ್ ಮತ್ತು ಪೋಲೀಸರು ಹಾಜರಿದ್ದರು ಬೇರೆ *5-6* ಜನ ಇದ್ದರು. ಆದರೆ ಆ ಕ್ರಿಶ್ಚಿಯನ್ ವ್ಯಕ್ತಿ ಹಾಜರಿದ್ದ ಬಗ್ಗೆ ನೋಡಿಲ್ಲ. ಪೋಲೀಸ್ ಠಾಣೆ ಬಳಿ ಹಾಜರು ಪಡಿಸಿದ್ದ ಬಟ್ಟೆಗಳಿಗೆ ಎಣ್ಣೆ ಹತ್ತಿತ್ತು. ಈಗ ನಾನು ನೋಡುತ್ತಿರುವ ಎಂ.ಒ *3* ಮತ್ತು *5* ಎಂದು ಗುರುತಿಸಿರುವ ಶರ್ಟ್ ಮತ್ತು ಪ್ಯಾಂಟ್ ಆ ದಿನ ಪೋಲೀಸರು ವಶಕ್ಕೆ ಪಡೆದಿದ್ದ ಬಟ್ಟೆಗಳು ಇರುತ್ತವೆ. ಆ ದಿನ ಬೇರೆ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*3.* ದಿಃ*02.03.2021* ರಂದು ನಜರ್ ಬಾದ್ ಪೋಲೀಸ್ ಠಾಣೆಯ ಪೋಲೀಸರು ಕೆ.ಸಿ.ಲೇಔಟ್ ನ ಒಂದು ಮನೆಯಲ್ಲಿ ಮಹಜರ್ ಗೆ ಪಂಚರಾಗಿ ಹಾಜರಿರುವಂತೆ ನನಗೆ ನೋಟಿಸ್ ಕೊಟ್ಟಿದ್ದರು ಎಂದರೆ ನಿಜ. ಆ ಕಾಲಕ್ಕೆ ಕೆ.ಸಿ.ಲೇಔಟ್ ನ ಮನೆ ಸಂಖ್ಯೆ *311* ರಲ್ಲಿ ಮಹಜರ್ ಮಾಡಿದ್ದರು ಎಂದರೆ ನಿಜ. ಆ ಮಹಜರ್ ಕಾಲಕ್ಕೆ ಆ ಮನೆಯಲ್ಲಿದ್ದ ಮೆಟ್ಟಿಲುಗಳ ಪೈಕಿ *12* ಮೆಟ್ಟಿಲುಗಳನ್ನು ಹತ್ತಿದ ನಂತರ ಇರುವ ಲ್ಯಾಂಡಿಂಗ್ ಜಾಗದಲ್ಲಿ ಒಂದು ಬಕೆಟ್ ಬಿದಿದ್ದು ಬಕೆಟ್ ನ ಒಳಭಾಗ ಎಣ್ಣೆ ಮೆತ್ತಿಕೊಂಡಿತ್ತು ಎಂದರೆ ಬಕೆಟ್ ಅನ್ನು ನಾನು ನೋಡಿರಲಲ್ಲ ಎಣ್ಣೆ ಬಿದ್ದಿದ್ದು ನಿಜ. ಈಗ ನಾನು ನೋಡುತ್ತಿರುವ ಎಂ.ಓ *1* ಬಕೆಟ್ ಅದೇ ಇರುತ್ತದೆ ಮತ್ತು ಅದನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಕೃತ್ಯ ಸ್ಥಳದಲ್ಲಿ ಬಿದಿದ್ದ ಎಣ್ಣೆಯನ್ನು ಒಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ತುಂಬಿಕೊಂಡು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ನಿಜ. ಈಗ ನಾನು ನೋಡುತ್ತಿರುವ ಎಂ.ಓ *2* ಆ ಡಬ್ಬಿ ಇರುತ್ತದೆ ಎಂದರೆ ನಿಜ.

*4.* ದಿಃ*03.03.2021* ರಂದು ಪೋಲೀಸ್ ಠಾಣೆಯಲ್ಲಿ ಎಂ.ಓ *3* ಮತ್ತು *5* ಎಂದು ಗುರುತಿಸಿರುವ ಶರ್ಟ್ ಮತ್ತು ಪ್ಯಾಂಟ್ ನ ಜೊತೆಗೆ ಈಗ ನಾನು ನೋಡುತ್ತಿರುವ ಎಂ.ಓ *4* ಎಂದು ಗುರುತಿಸಿರುವ ಬನಿಯನ್ ಅನ್ನು ಸಹ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಮಹಜರ್ ಕಾಲಕ್ಕೆ ನನಗೆ ನಿ.ಪಿ-*3* ರಂತೆ ನೋಟಿಸ್ ಕೊಟ್ಟಿದ್ದರು ಎಂದರೆ ನಿಜ.

ಎಂ.ಒ *1* ಮತ್ತು ಎಂ.ಒ *4* ಬನಿಯನ್ ಅನ್ನು ಅಮಾನತ್ತು ಪಡಿಸಿಕೊಂಡಿದ್ದು ನಾನು ನೋಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿ

<u>ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎಸ್.ಪಿ.ಟಿ ರವರಿಂದಃ-</u>

*5.* ನನಗೆ ಅನೂಪ್ ಇವರು ಚೆನ್ನಾಗಿ ಪರಿಚಯ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರು ನನ್ನ ಬ್ಯಾಟರಿ ಅಂಗಡಿಯ ಗ್ರಾಹಕರು ಇರುತ್ತಾರೆ. ಈ ದಿನವೂ ಸಹ ಅನೂಪ್ ಅವರೇ ನನಗೆ ದಾಖಲೆಗಳನ್ನು ಕೊಟ್ಟು ಸಾಕ್ಷಿ ಹೇಳಲು ಹೇಳಿ ಕೊಟ್ಟಿದ್ದಾರೆ ಎಂದರೆ ಅಲ್ಲಿ ನಡೆದಿದ್ದನ್ನು ಹೇಳಿ ಕೊಟ್ಟಿದ್ದಾರೆ. ನಾನು ಕಾವೇರಿ ರಸ್ತೆ, ರಾಘವೇಂದ್ರ ನಗರದಲ್ಲಿ ವಾಸವಿದ್ದೇನೆ. ನನ್ನ ಅಂಗಡಿ ಪೋಲೀಸ್ ಠಾಣೆಯ ಹತ್ತಿರದಲ್ಲೇ ಇದೆ ಎಂದರೆ ನಿಜ. ನೋಟಿಸ್ ನಲ್ಲಿ ನನ್ನ ಅಂಗಡಿ ಪೋಲೀಸ್ ಠಾಣೆ ಹತ್ತಿರದಲ್ಲೇ ಇದೆ ಎಂದು ನಮೂದು ಇಲ್ಲ ಎಂದರೆ ನಿಜ. ನನ್ನ ಮನೆ ಪೋಲೀಸ್ ಠಾಣೆಯಿಂದ *4-5* ಕಿ.ಮೀ ದೂರವಿದೆ. ಆ ದಿನ ಮಹಜರ್ ಮಾಡಿದ್ದ ಮನೆಗೂ ನನ್ನ ಮನೆಗೂ ಬಹಳಷ್ಟು ಅಂತರ ಇದೆ ಎಂದರೆ ನಿಜ. ಮನೆ ಬಳಿ ಮಹಜರ್ ಮಾಡಿದ ದಿನ ಬೆಳಗ್ಗೆ *11-12* ಗಂಟೆಗೆ ನನಗೆ ನೋಟಿಸ್ ಕೊಟ್ಟಿದ್ದರು. ನೋಟಿಸ್ ನಲ್ಲಿ ವಿಳಾಸ ನಮೂದು ಇಲ್ಲ ಎಂದರೆ ನಿಜ. ಅನೂಪ್ ಇವರೇ ನನಗೆ ಆ ಮನೆ ವಿಳಾಸ ಹೇಳಿದ್ದರು. ಆ ಮನೆ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ನಿಜ. ಆ ಮನೆಯಲ್ಲಿ ವಯಸ್ಸಾದ ದಂಪತಿಗಳು ಇದ್ದರು ಎಂದರೆ ನಿಜ. ನಾನು ಹೋದಾಗ ಅಲ್ಲಿ ಅನೂಪ್ ಇವರು ಇದ್ದರು ಎಂದರೆ ನಿಜ. ಆ ಕಾಲಕ್ಕೆ ಪೋಲೀಸರು ಮತ್ತು ಕ್ರಿಶ್ಚಿಯನ್ ವ್ಯಕ್ತಿ ಸಹ ಇದ್ದರು. ನಾನು ಹೊಗುವಷ್ಟರಲ್ಲಿ ಪೋಲೀಸರು ಎಲ್ಲಾ ವಸ್ತುಗಳನ್ನು ಪ್ಯಾಕ್ ಮಾಡಿ ಇಟ್ಟಿದ್ದರು ಎಂದರೆ ನಿಜ. ಆ ವಸ್ತುಗಳನ್ನು ನನಗೆ

ತೋರಿಸಿರಲಿಲ್ಲ ಎಂದರೆ ಎಣ್ಣೆ ಪ್ಯಾಕೆಟ್ ಅನ್ನು ತೋರಿಸಿದ್ದರು. ನಾನು ಹೊಗುವ ಮೊದಲೇ ಬರವಣಿಗೆ ಮುಗಿದಿತ್ತು ಎಂದರೆ ಸರಿಯಲ್ಲ. ಆ ದಿನ ನಾನು ಆ ಸ್ಥಳಕ್ಕೆ ಹೊಗೇ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

***6.*** ನಿಪಿ-***3*** ನೋಟಿಸ್ ನಲ್ಲೂ ಸಹ ವಿಳಾಸ ನಮೂದು ಇಲ್ಲ ಎಂದರೆ ನಿಜ. ಪೋಲೀಸ್ ಠಾಣೆಯಲ್ಲಿ ಮಾಡಿದ್ದ ಮಹಜರ್ ಕಾಲಕ್ಕೆ ಶರ್ಟ್ ಮತ್ತು ಪ್ಯಾಂಟ್ ಅನ್ನು ನನಗೆ ತೋರಿಸಿದ್ದರು. ಆ ಪ್ಯಾಂಟ್ ನೀಲಿ ಬಣ್ಣದ್ದು ಇತ್ತು. ಶರ್ಟ್ ನ ಬಣ್ಣ ಈಗ ನೆನಪಿಲ್ಲ. ಆ ಕಾಲಕ್ಕೆ ಪೋಲೀಸರು ಏನನ್ನೊ ಹೇಳಿಕೊಂಡು ಬರವಣಿಗೆ ಮಾಡಿದ್ದರು. ಎಂ.ಓ ***3*** ಮತ್ತು ***5*** ಬಟ್ಟೆಗಳನ್ನು ಅನೂಪ್ ಇವರ ಸಂಬಂದಿ ಎಣ್ಣೆ ಚೆಲ್ಲಿದಾಗ ಧರಿಸಿದ್ದಾಗಿ ಹೇಳಿದ್ದರು. ಅದನ್ನು ಅನೂಪ್ ಇವರೇ ಹೇಳಿದ್ದರು. ಠಾಣೆಯಲ್ಲೂ ಸಹ ನನ್ನ ಸಮಕ್ಷಮ ಯಾವುದೇ ವಸ್ತು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅನೂಪ್ ಇವರ ಹೇಳಿಕೆಯಂತೆ ನಿ.ಪಿ.*2* ಕ್ಕೆ ಸಹಿಯನ್ನು ಮಾತ್ರ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*